ಸನ್ಮಾನ್ಯ ಶಿವಕುಮಾರ್‌ರವರು ಹೇಳಿದ್ದಂಥ ಪ್ರಶ್ನೆ ವಾಸ್ತವವಾಗಿದೆ. ನಮ್ಮ ಕನ್ನಡ ಚಲನಚಿತ್ರ ಕ್ಷೇತ್ರಕ್ಕೆ ಒಂದು ರೀತಿಯ ದೊಡ್ಡ ಆಘಾತವಾಗತಕ್ಕಂಥ ಪರಿಸ್ಥಿತಿಯಲ್ಲಿ ಏಡಿಯೋ ಹಾವಳಿ ನಡೆಯುತ್ತಿದೆ. ಅದಕ್ಕೋಸ್ಕರ ಬಹುಶಃ ಕೇಂದ್ರ ಸರ್ಕಾರ ಕಾನೂನು ಮಾಡಬೇಕಾಗಿದೆ. ನಾವು ನಮ್ಮ ಕಾನೂನಿನ ಮಿತಿಯಲ್ಲಿ ಅಥವಾ ಹೊಸದಾಗಿ ಏನಾದರೂ ಕಾನೂನು ಮಾಡಿ ಇದರ ಬಗ್ಗೆ ಸರಿಯಾದ ನಿಯಂತ್ರಣ ಮಾಡುವುದು ಇದ್ದರೆ. ನಾನು ಅದಕ್ಕೆ ಸಿದ್ಧನಾಗಿದ್ದೇನೆ. ಪ್ರತ್ಯೇಕವಾಗಿ ಅದರ ವಿಚಾರ ಮಾಡುತ್ತೇವೆ. ತಾವು ಹೇಳಿದ್ದು ಸರಿ. ಏಕೆಂದರೆ, ಇಷ್ಟೆಲ್ಲಾ ಬಂಡವಾಳ ಹಾಕಿ ಥಿಯೇಟರ್‌ಗಳನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ಆ ಥಿಯೇಟರ್‌ಗಳು ಈಗಾಗಲೇ ಷಾಪಿಂಗ್ ಕಾಂಪ್ಲೆಕ್ಸ್ ಆಗಿಬಿಟ್ಟಿದೆ. ಇನ್ನು ಮುಂದೆ ಥಿಯೇಟರ್‌ಗಳ ಡೆವಲಪ್‌ಮೆಂಟ್ ಆಗದೇ ಇದ್ದರೆ, ಅವನ್ನು ನಾವು ಉಳಿಸದೇ ಇದ್ದರೆ, ಕನ್ನಡ ಸಾಂಸ್ಕೃತಿಕ ಜಗತ್ತಿಗೆ ಸಾಕಷ್ಟು ನಷ್ಟ ಆಗುತ್ತದೆ. ಇದರ ಬಗ್ಗೆ ನಾವು ತೀವ್ರವಾಗಿ ಚಿಂತನೆ ಮಾಡಬೇಕಾಗುತ್ತದೆಂಬುದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಇದರಲ್ಲಿ ಆಸಕ್ತಿ ಇರತಕ್ಕಂತ ಮಾನ್ಯ ಸದಸ್ಯರನ್ನು ಕರೆಯಿಸಿ ಪ್ರತ್ಯೇಕವಾಗಿ ಮಾತುಕತೆ ಮಾಡುತ್ತೇನೆ. ರೀಮೇಕ್ ಚಿತ್ರಗಳ ಬಗ್ಗೆ ಏನು ಮಾಡುತ್ತೀರಿ ಎಂದು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ್ದುದು ಸರಿ. ಏಕೆಂದರೆ, ಇವತ್ತು ಅವುಗಳಲ್ಲಿ ಸ್ವಂತಿಕೆ ಇಲ್ಲ. ಸಹಾಯಧನ ಕೊಡುತ್ತಿರುವುದಾದರೂ ಏಕೆ? ಕನ್ನಡ ಚಲನಚಿತ್ರ ಪ್ರಪಂಚದಲ್ಲಿ ಸಾಂಸ್ಕೃತಿಕ ಜಗತ್ತಿನಲ್ಲಿ ಒಂದು ಸ್ವಂತಿಕೆ ಬರಬೇಕು, ವ್ಯಕ್ತಿತ್ವ ಬರಬೇಕು, ಇದು ಹುಲುಸಾಗಿ ಬೆಳೆಯಬೇಕು ಎನ್ನುವ ಉದ್ದೇಶದಿಂದ ಮಾಡಿದ್ದುದು. ತಾವು ಏನು ಸೂಚನೆ ಕೊಟ್ಟಿದ್ದೀರಿ ಅದರ ಬಗ್ಗೆ ನಾವು ತೀವ್ರವಾಗಿ ಗಮನ ಕೊಡುತ್ತೇವೆ.

ಅಧ್ಯಕ್ಷರು:- ಮಾನ್ಯ ದಯಾನಂದರಾವ್‌ರವರೇ, ನಿಮ್ಮ ೨ಆನೇ ಪ್ರಶ್ನೆಯನ್ನು ಬೇರೆ ಇಲಾಖೆಗೆ ಉತ್ತರಕ್ಕಾಗಿ ಕಳಿಸಿರುವುದರಿಂದ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇವೆ.

ವಿಷಯ:- ತ್ರಿವರ್ಣ ಕಾರ್ಡುಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೫:- (೫೦೯)
ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತ್ರಿವರ್ಣ ಧ್ವಜ (ಹಸಿರು) ಕಾರ್ಡ್ ಹಾಗೂ ಕೇಸರಿ ಕಾರ್ಡ್ ವಿತರಿಸಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ತ್ರಿವರ್ಣ ಧಜ (ಹಸಿರು) ಹಾಗೂ ಕೇಸರಿ ಕಾರ್ಡ್ ವಿತರಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಇ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಅನೇಕ ಅರ್ಹ ಫಲಾನುಭವಿಗಳಿಗೆ ಹಸಿರು ಕಾರ್ಡ್ ಸಿಗದೆ ಇದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಅದನ್ನು ಎಷ್ಟು ದಿನಗಳಲ್ಲಿ ಸರಿಪಡಿಸಲಾಗುವುದು?

ಶ್ರೀಮತಿ ಮನೋರಮ ಮಧ್ವರಾಜ್
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ತ್ರಿವರ್ಣ ಪಡಿತರ ಚೀಟಿಗಳು: ೨೭,೫೧,೩೩೨
ಕೇಸರಿ ಪಡಿತರ ಚೀಟಿಗಳು: ೨೭,೫೨,೨೮೪
ತ್ರಿವರ್ಣ ಪಡಿತರ ಚೀಟಿಗಳು: ೨,೫೭,೩೭೨
ಕೇಸರಿ ಪಡಿತರ ಚೀಟಿಗಳು: ೧,೪೪,೮೭೪

(ತಾಲ್ಲೂಕುವಾರು ವಿವರಗಳನ್ನು ಅನುಬಂಧ ೧ರಲ್ಲಿ ನೀಡಿದೆ).

ಇಲ್ಲ

ಈವರೆಗೆ ಗುರುತಿಸಲಾದ ಎಲ್ಲಾ ಅರ್ಹ ಫಲಾನುಭವಿಗಳಿಗೆ ಶ್ರಿವರ್ಣ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಉದ್ಭವಿಸುವುದಿಲ್ಲ.

ಅನುಬಂಧ. ೧

ಧಾರವಾಡ ಜಿಲ್ಲೆಯಲ್ಲಿ ವಿತರಣೆಯಾಗಿರುವ ತ್ರಿವರ್ಣ ಹಾಗೂ
ಕೇಸರಿ ಪಡಿತರ ಚೀಟಿಗಳ ತಾಲ್ಲೂಕುವಾರು ತಖ್ತೆ.

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	ತ್ರಿವರ್ಣ ಪಡಿತರ ಚೀಟಿಗಳು	ಕೇಸರಿ ಪಡಿತರ ಚೀಟಿಗಳು	ಒಟ್ಟು
೧.	ಧಾರವಾಡ	೨೦೧೬೫	೧೨೯೪೫	೩೨೧೧೦
೨.	ಹುಬ್ಬಳ್ಳಿ	೧೨೬೬೭	೬೧೯೩	೧೮೮೬೦
೩.	ಕಲಘಟಗಿ	೧೪೪೩೫	೫೪೩೬	೧೯೮೭೧
೪.	ಗದಗ್	೧೫೯೦೭	೧೦೪೦೯	೨೬೩೧೬
೫.	ಮುಂಡರಗಿ	೧೨೦೭೭	೪೪೫೮	೧೬೫೩೫
೬.	ರೋಣ	೧೬೫೯೫	೧೬೧೦೨	೩೨೬೯೭
೭.	ಸವಣೂರು	೧೦೩೮೬	೫೭೯೮	೧೬೧೮೪
೮.	ಶಿಗ್ಗಾಂವ್	೧೧೬೫೨	೯೩೫೪	೨೧೦೦೬
೯.	ಶಿರಹಟ್ಟಿ	೧೩೮೨೮	೮೬೮೮	೨೨೭೧೬
೧೦.	ಕುಂದುಗೋಲ್	೧೫೪೦೮	೬೨೮	೨೨೭೦೬
೧೧.	ಹಾವೇರಿ	೨೦೯೬೬	೮೬೯೨	೨೯೬೫೮
೧೨.	ಬ್ಯಾಡಗಿ	೧೦೮೩೨	೪೯೧೩	೧೫೭೪೫
೧೩.	ರಾಣೆಬೆನ್ನೂರು	೨೩೯೩೪	೭೭೪೩	೩೧೬೭೭
೧೪.	ಹಿರೇಕೇರೂರ್	೧೯೮೧೯	೧೦೧೦೪	೨೯೯೨೩
೧೫.	ನವಲಗುಂದ	೧೨೩೧೫	೧೧೩೯೭	೨೩೭೧೨
೧೬.	ನರಗುಂದ	೪೩೧೦	೪೩೭೧	೮೬೭೧
೧೭.	ಹಾನಗಲ್	೨೨೦೭೩	೧೦೧೭೩	೩೨೨೪೪
	ಒಟ್ಟು	೨೫೭೩೭೨	೧೪೪೪೬೪	೪೦೨೨೩೬

ಶ್ರೀ ಮಂಜುನಾಥ್ ಸಿ. ಕುನ್ನೂರ್:- ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಎಷ್ಟು ತ್ರಿವರ್ಣ ಧ್ವಜ ಕಾರ್ಡು, ಹಾಗೂ ಕೇಸರಿ ಕಾರ್ಡುಗಳನ್ನು ವಿತರಿಸಲಾಗಿದೆ ಎಂಬ ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ತ್ರಿವರ್ಣ ಧ್ವಜ ಕಾರ್ಡು ೨೭,೫೧,೩೩೨ ಕೇಸರಿ ಪಡಿತರ ಚೀಟಿಗಳು ೨೭,೫೨,೨೮೪ ಎಂದು ಹೇಳಿದ್ದಾರೆ, ಮತ್ತು ಧಾರವಾಡ ಜಿಲ್ಲೆಯಲ್ಲಿ ೨೫೭೩೭೨ ಹಾಗೂ ಕೇಸರಿ ಕಾರ್ಡು ೧,೪೪,೮೬೪ ಎಂದು ಹೇಳಿದ್ದಾರೆ. ತಾಲ್ಲೂಕುವಾರು ವಿವರವನ್ನು ಕೇಳಿದಾಗ, ಸವಣೂರು ತಾಲ್ಲೂಕಿನಲ್ಲಿ ಈ ತ್ರಿವರ್ಣ ಧ್ವಜ ಕಾರ್ಡುಗಳನ್ನು ನನ್ನ ಮತ ಕ್ಷೇತ್ರದಲ್ಲಿ ೧೦,೩೮೬ ಕಾರ್ಡುಗಳು ಹಾಗೂ ಶಿಗ್ಗಾಂವ್ ತಾಲ್ಲೂಕಿನಲ್ಲಿ ೧೧೬೫೨ ಕಾರ್ಡು ಎಂದು ಹೇಳಿದ್ದಾರೆ. ಈ ಅಂಕಿ ಸಂಖ್ಯೆಗಳನ್ನು ನೋಡಿದಾಗ ಸರಿಯಾದ ಅರ್ಹ ಫಲಾನುಭವಿಗಳಿಗೆ ಕಾರ್ಡುಗಳನ್ನು ಕೊಟ್ಟಿರುವುದಿಲ್ಲ. ಮತ್ತು ಧಾರವಾಡ ಜಿಲ್ಲೆಯಲ್ಲಿ ಇವತ್ತು ಕನಿಷ್ಠ ಪಕ್ಷ ೫ ಲಕ್ಷ ಅರ್ಹ ಫಲಾನುಭವಿಗಳಿಗೆ ಕಾರ್ಡುಗಳನ್ನು ಕೊಡದೇ ಇರುವಂಥ ವ್ಯವಸ್ಥೆಯಾಗಿದೆ. ಈ ಕಾರಣದಿಂದ ಇದನ್ನು ಸರಿಪಡಿಸಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಇದರಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್:- ನನ್ನ ಮತ ಕ್ಷೇತ್ರಗಳಾದ ಶಿಗ್ಗಾಂವ್ ಮತ್ತು ಸವಣೂರಿನಲ್ಲಿ ೧೦,೩೮೬, ೧೧,೬೫೬ ಕಾರ್ಡುಗಳನ್ನು ಈಗಾಗಲೇ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಈವರೆಗೆ ಕಾರ್ಡುಗಳ ಹಂಚಿಕೆ ಆಗಿರುವುದಿಲ್ಲ. ಆ ಕಾರಣದಿಂದ ಕಾರ್ಡುಗಳನ್ನು ಕೊಡಬೇಕು ಮತ್ತು ರೀಸರ್ವೆ ಮಾಡಿ ಪುನಃ ಅದನ್ನು ಪರಿಶೀಲಿಸಿ ಅವರಿಗೆ ಕಾರ್ಡುಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಸರಿಪಡಿಸುತ್ತೇವೆ.

ವಿಷಯ:- ಹರಿಜನರ ಮೇಲೆ ಹಲ್ಲೆ ಹಾಗೂ ಸಾಮೂಹಿಕ ಬಹಿಷ್ಕಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬:- (೨೪೧)
ಶ್ರೀಮತಿ ಮೋಟಮ್ಮ (ಮೂಡಿಗೆರೆ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಇತ್ತೀಚಿನ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವಯಾವ ಜಿಲ್ಲೆಗಳಲ್ಲಿ ಹರಿಜನರ ಮೇಲೆ ದೌರ್ಜನ್ಯ ಹಾಗೂ ಸಾಮೂಹಿಕ ಬಹಿಷ್ಕಾರ ಪ್ರಕರಣಗಳು ನಡೆದಿದೆ?
ಆ) ಅದಕ್ಕೆ ಕಾರಣಗಳೇನು?
ಇ) ಇಂತಹ ಪ್ರಕರಣಗಳು ಪುನಃ ಪುನಃ ಮರುಕಳಿಸದಂತೆ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲೂ ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು ಸುಮಾರು ೧೦ ಜಿಲ್ಲೆಗಳಲ್ಲಿ ಗುರುತರವಾದ ೧೬ ದೌರ್ಜನ್ಯ ಪ್ರಕರಣಗಳು ನಡೆದಿದೆ. ಬಹಿಷ್ಕಾರ ಪ್ರಕರಣಗಳು ವರದಿಯಾಗಿರುವುದು ಕಂಡು ಬಂದಿರುವುದಿಲ್ಲ.

ಅನುಬಂಧ 'ಅ'ನ್ನಲ್ಲಿ ನೀಡಲಾಗಿದೆ.

ಅನುಬಂಧ 'ಅ'ನ್ನಲ್ಲಿ ನೀಡಲಾಗಿದೆ.